



# ಹೌಸ್ ಫುಲ್!



**ಮನೆ ಕಟ್ಟುವಾಗ ಎಷ್ಟೆಲ್ಲಾ ಆಧುನಿಕ ವಿನ್ಯಾಸ ಅಳವಡಿಸಿದ್ದರೂ, ಏನೆಲ್ಲಾ ಸ್ಮಾರ್ಟ್ ವಸ್ತುಗಳು ಬಂದಿದ್ದರೂ ಅಲ್ಲಲ್ಲಿ ಸಾಮಾನು ಪೇರಿಸಿಡುವ ಅಭ್ಯಾಸ ಮಾತ್ರ ತಪ್ಪುವುದಿಲ್ಲ. ಸೋಫಾ, ಫ್ರಿಜ್, ವಾಷಿಂಗ್ ಮೆಷಿನ್ ಮೇಲೆ, ಅಷ್ಟೇ ಏಕೆ ಓವನ್ ಒಳಗೂ ವಸ್ತುಗಳು ಜಮಾಯಿಸದೇ ಇರಲಾರವು.**

**■ ನಳಿನಿ ಟಿ. ಭೀಮಪ್ಪ**

ಬಿಟ್ಟ ಸ್ಥಳ ತುಂಬಿರಿ, ಖಾಲಿ ಜಾಗ ಭರ್ತಿ ಮಾಡಿರಿ ಎಂದು ಶಾಲಾ–ಕಾಲೇಜು ದಿನಗಳ ಪ್ರಶ್ನೆಪತ್ರಿಕೆಗಳಲ್ಲಿ ಕೊಟ್ಟಾಗ, ಅವುಗಳನ್ನು ತುಂಬಲು ಹೆಣಗಾಡುತ್ತಿದ್ದುದು ನೆನಪಿದೆ. ಆದರೆ ಮನೆಗಳಲ್ಲಿ ಬಿಟ್ಟ ಸ್ಥಳವನ್ನು ಚೂರೂ ಬಿಡದಂತೆ ತುಂಬುವುದು, ಖಾಲಿ ಜಾಗವನ್ನು ಸಂಪೂರ್ಣ ಆಕ್ರಮಿಸುವುದನ್ನು ಯಾರಿಗೂ ಹೇಳಿಕೊಡುವುದೇ ಬೇಡ. ಆ ಪ್ರಕ್ರಿಯೆ ಕುಟುಂಬವರ್ಗದವರಿಂದ ತಂತಾನೇ ನಡೆಯುತ್ತಿರುತ್ತದೆ. ಮನೆಯನ್ನು ಅದೆಷ್ಟೇ ವಸ್ತುಪ್ರಕಾರವಾಗಿ ಕಟ್ಟಿಸಿರಲಿ, ವಸ್ತುಗಳ ಮೇಲೆ, ಕೆಳಗೆ, ಒಳಗಿನ ಸ್ಥಳವನ್ನು ಚೂರೂ ಬಿಡದಂತೆ ಉಪಯೋಗಿಸಿಕೊಳ್ಳುವುದರಲ್ಲಿ ನಮ್ಮವರು ನಿಸ್ಸೀಮರು.

ಹಳೆಯ ಕಾಲದಲ್ಲಿ ಬಹುತೇಕ ಮನೆಗಳ ಒಳಗೆ ಕಿಟಕಿಯ ಕೆಳಗೆ ಅರ್ಧ ಅಡಿಯಿಂದ ಒಂದಡಿ ಕಟ್ಟೆಯ ರೀತಿಯಲ್ಲಿ ಇರುವ ಸಜ್ಜ ಇರುತ್ತಿದ್ದುದು ನೆನಪಿರಬಹುದು. ಅದರ ಮೇಲೆ ಬುಡ್ಡಿದೀಪ, ಕಾಫಿ ಕುಡಿದ ಲೋಟ, ನೀರಿನ ಚೊಂಬು, ಲೋಟ, ಸಣ್ಣಕನ್ನಡಿ, ಕನ್ನಡಕ, ಧೂಮಪಾನ ಪ್ರಿಯರಿದ್ದರೆ ಆಶ್‌ಟ್ರೇ, ರಾತ್ರಿಯ ಹೊತ್ತು ಮುಡಿಯಿಂದ ಬಿಚ್ಚಿಟ್ಟ ಹೂವು– ಹೀಗೆ ಏನೇನೆಲ್ಲಾ ವಸ್ತುಗಳು ಜಮಾಯಿಸಿರುತ್ತಿದ್ದವು. ಬಾಗಿಲಿನ ಮೇಲೆಯೂ ವೆಂಟಿಲೇಟರ್ ತರಹ ಸ್ಥಳವಿರುತ್ತಿದ್ದುದರಿಂದ, ಅಲ್ಲಿ ಸಿಗುವ ಸ್ವಲ್ಪ ಸ್ಥಳ ಚಾವಿ, ಬೀಡಿ, ಬ್ಲೇಡು, ಸಿಗರೇಟು ಪ್ಯಾಕು, ಬೆಂಕಿಪೊಟ್ಟಣಗಳ ಸ್ಥಾನವಾಗಿರುತ್ತಿತ್ತು. ಬಚ್ಚಲು, ಶೌಚಾಲಯದ ಕಿಟಕಿ ಸಜ್ಜಗಳ ಕತೆಯೂ ಅಷ್ಟೇ. ಅವುಗಳು ಸ್ವಚ್ಛವಾಗುವುದು ಹೆಚ್ಚಾಗಿ ಸುಣ್ಣಬಣ್ಣ ಬಳಿಯುವ ಸಮಯದಲ್ಲೇ ಬಿಡಿ. ಹೀಗೆ ಸಿಕ್ಕಸಿಕ್ಕಲ್ಲೆಲ್ಲ ತುಂಬಿ ತುಳುಕಿ ಹೌಸ್‌ಫುಲ್ ಮಾಡುವುದನ್ನು ನೋಡಿ ರೋಸಿ ಹೋಗಿ, ಈಗಿನ ಕಾಲದಲ್ಲಿ ಮನೆ ಕಟ್ಟಿಸುವವರು ಸ್ವಲ್ಪ ತಲೆ ಓಡಿಸಿ, ಒಳಗೆ ಸ್ಥಳ ಬಿಡದೆ, ಕಿಟಕಿಯ ಹೊರಗಡೆ ಸ್ಥಳ ಬಿಟ್ಟಿರುತ್ತಾರೆ. ಹಾಗೆಂದು ಅದು ಖಾಲಿಯಾಗಿರುತ್ತವೆ ಎಂದು ಊಹಿಸಿಕೊಂಡರೆ ತಪ್ಪಾಗುತ್ತದೆ.

ಅದು ಹಿತ್ತಲಿಗೆ ಸೇರಿದ ಕಿಟಕಿಯಾದರೆ ಅಲ್ಲಿ ಬಟ್ಟೆ ಕ್ಲಿಪ್ಪುಗಳು, ಬಟ್ಟೆ ಸೋಪು, ಸೋಪಿನ ಪುಡಿ ಡಬ್ಬ, ಪಾತ್ರೆ ತೊಳೆಯುವ ಡಬ್ಬ, ನೀಲಿಡಬ್ಬ ಆಕ್ರಮಿಸಿರುತ್ತವೆ. ಅಕ್ಕಪಕ್ಕದ ಕಿಟಕಿಯಾದರೆ ಮೊಳೆ, ಕಲ್ಲು ಎಂದು ಹಾಳುಮೂಳು ಎಲ್ಲ ಪೇರಿಸಿಟ್ಟಿರುತ್ತಾರೆ. ಶೋಕೇಸಿನ ಸಾಮಾನುಗಳ ಜೊತೆಗೆ, ಅದಕ್ಕೆ ಸಂಬಂಧಪಡದ ಸಾಮಾನುಗಳೇ ಹೆಚ್ಚಿರುತ್ತವೆ.

ಬಚ್ಚಲುಮನೆಯಲ್ಲಿ ನೀರಿಗಾಗಿ ಥಳಥಳ ಹೊಳೆಯುವ ನಲ್ಲಿಗಳು, ಹಸಿಬಟ್ಟೆ, ಒಣಬಟ್ಟೆಗೆ ಸ್ಟೀಲ್‌ಬಾರ್‌ಗಳನ್ನು ಹಾಕಿಸುವುದೇನೋ ಸರಿಯೇ. ಆದರೆ ಬಹುತೇಕ ಜನರು ಈಗಲೂ ಹಿಂಡಿದ ಹಸಿ ಬಟ್ಟೆಗಳನ್ನು ನಲ್ಲಿಯ ಕುತ್ತಿಗೆಗೆ ನೇತುಹಾಕುವುದನ್ನು ಬಿಡಲಾರರು. ಮಗ್ ಸಹ ಕುತ್ತಿಗೆಗೇ ಮೂಲ. ಇನ್ನು ಸ್ಟೀಲ್ ಬಾರ್‌ಗಳ ಮೇಲೆ ಒಣಬಟ್ಟೆಯನ್ನೇನೋ ಹಾಕುತ್ತಾರೆ, ಜೊತೆಗೆ ಹೆಣ್ಣುಮಕ್ಕಳ ಮೊಸಳೆ ಕ್ಲಿಪ್ಪುಗಳು ಅವುಗಳನ್ನು ಕಚ್ಚಿಹಿಡಿದಿರುತ್ತವೆ. ಕಾರ್ನರ್ ಕಟ್ಟೆಗಳಲ್ಲಿ ಬಿಚ್ಚಿಟ್ಟ ಸೇಫ್ಟಿ ಪಿನ್ನು, ಹೇರ್ ಪಿನ್ನು, ಕ್ಲಿಪ್ಪುಗಳು ಅಲ್ಲಿ ಕುಳಿತಿರುವ ಸೋಪಿನ ಸಾಮ್ರಾಜ್ಯದ ನೀರನ್ನು ಹೀರಿ, ತುಕ್ಕು ಹಿಡಿಸಿಕೊಂಡು, ಕೆಂಪುನೀರು ಬಿಟ್ಟು ಕರಗಿಹೋಗುತ್ತವೆಯೇ ಹೊರತು ಬಚ್ಚಲಿನಿಂದ ಸೇಫ್ ಆಗಿ ಹೊರಹೋಗುವುದು ಕಡಿಮೆ. ಈ ಸೇಫ್ಟಿ ಪಿನ್ನು, ಕ್ಲಿಪ್ಪು, ಹೇರ್ ಪಿನ್ನಿನ ವಿಶೇಷತೆಯೆಂದರೆ, ಇವು ಸರ್ವಾಂತರ್ಯಾಮಿಗಳು. ಮನೆಯ ಪ್ರತಿಯೊಂದು ಕೋಣೆಯ ಸಂದಿಗೊಂದಿಗಳಲ್ಲಿ ತಮ್ಮ ಅಸ್ತಿತ್ವವನ್ನು ಸ್ಥಾಪಿಸಿರುತ್ತವೆ. ಸರಿಯಾದ ಸಮಯಕ್ಕೆ ಸಿಗದೆ

